ಸಾರಾಯಿ ಅಂಗಡಿಗಳ ಪರವಾನಿಗೆ ಕುರಿತಂ

೭೨೩. ಶ್ರೀ ಆರ್ ಎನ್ ನಾಯಕ್ (ಭಟಕಳ್).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ೧೯೮೪ ರಿಂದ ಈವರೆಗೆ ಪ್ರತಿ ವರ್ಷ ಎಷ್ಟೆಷ್ಟು ಸಾರಾಯಿ ಅಂಗಡಿಗಳಿಗೆ ಪರವಾನಿಗೆ ನಡೆಸಲು ಲೈಸನ್ಸ್ ನೀಡಲಾಗಿದೆ ?

ಆ) ಈ ವರ್ಷಕ್ಕೆ ಪರವಾನಿಗೆ ಹೊಂದಿದ ಸರಾಯಿ ಅಂಗಡಿಗಳ ಸಂಖ್ಯೆ ಎಷ್ಟು ?

ಇ) ಜನಸಂಖ್ಯೆಗೆ ಅನುಗುಣವಾಗಿ ಸರಾಯಿ ಅಂಗಡಿಗಳಿಗೆ ಪರವಾನಿಗೆ ನೀಡಲಾಗುವುದೇ, ಹಾಗಿದ್ದಲ್ಲಿ ಎಷ್ಟು ಜನರಿಗೆ ಒಂದರಂತೆ ಸಾರಾಯಿ ಅಂಗಡಿಗಳಿವೆ ?

ಈ) ಸಾರಾಯಿ ಸಾಕಷ್ಟು ಸರಬರಾಜಾಗದ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆ, ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು ?

ಉ) ದಿನ ಒಂದಕ್ಕೆ ಖರ್ಚಾಗುತ್ತಿರುವ ಸಾರಾಯಿ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿದೆಯೇ ಹಾಗೂ ಸಾರಾಯಿ ಹೆಚ್ಚಿಗೆ ಖರ್ಚು ಮಾಡಲು ಸರ್ಕಾರ ಯೋಚಿಸುತ್ತಿದೆಯೇ ?

ಶ್ರೀ ಹೆಚ್ ಟಿ ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

ಅ) ೧೯೮೪-೮೫ –೮೩೬೮
೧೯೮೫-೮೬ –೮೫೧೧
೧೯೮೬-೮೭ –೮೭೬೦

ಆ) ೮೭೬೦

ಇ) ಇಲ್ಲ.

ಈ) ಹೌದು, ಪರಿಶೀಲನೆ ನಂತರ ಅವುಗಳಲ್ಲಿ ಹೆಚ್ಚಿನವು ಆಧಾರ ರಹಿತ ದೂರುಗಳೆಂದು ಕಂಡು ಬಂದಿವೆ.

ಉ) ಇಲ್ಲ.

ಕೆ.ಪಿ. ಎಸ್. ಸಿ. ಯಿಂದ ನಡೆದ ಗೆಜೆಟೆಡ್ ಪ್ರೊಬೇಷನರಿ ತಹಸೀಲ್ದಾರ್ ಪರೀಕ್ಷೆಯ ಬಗ್ಗೆ

೧೦೮೧. ಶ್ರೀ ಬಿ ಎಸ್, ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ನೇ ರಾಜ್ಯ ಪತ್ರಾಂಕಿತ ಪ್ರೊಬೇಷನರಿ ತಹಸೀಲ್ದಾರ್‌ರವರ ಪರೀಕ್ಷೆ ಸಂದರ್ಭದಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ನಡೆಸಿದ ಪರೀಕ್ಷೆಯಲ್ಲಿ ೧೮೪೫೫ ಮತ್ತು ೧೮೪೫೯ ಮತ್ತು ನೊಂದಣಿ ಸಂಖ್ಯೆಗಳ ಅಭ್ಯರ್ಥಿಗಳನ್ನು ಒಂದಂ ಕೇಂದ್ರದಿಂದ ಮಂತೊಂದು ಕೇಂದ್ರಕ್ಕೆ ಪರೀಕ್ಷೆ ತೆಗೆದು ಕೊಳ್ಳಲಂ ಅವಕಾಶ ಮಾಡಿಕೊಟ್ಟಿರುವುದು ನಿಜವೇ ?

ಆ) ಈ ಮೇಲ್ಕಂಡ ಇಬ್ಬರು ಸದರಿ ಹುದ್ದೆಗೆ ಆಯ್ಕೆ ಆಗಿದ್ದಾರೆಯೇ ?

ಇ) ಹಾಗಿದ್ದಲ್ಲಿ ಅವರ ಹೆಸರು ಈಗ ಹಾಲಿ ಕೆಲಸ ಮಾಡುತ್ತಿರುವ ಸ್ಥಳದ ಹೆಸರೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೫-೮೬ನೇ ಸಾಲಿನ ಗೆಜೆಟೆಡ್ ಪ್ರೊಬೇಷನರುಗಳ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳ ಪರೀಕ್ಷೆಯಲ್ಲಿ ನೋಂದಣಿ ಸಂಖ್ಯೆ ೧೮೪೫೫ ಮತ್ತು ೧೮೪೫೯ರ ಇಬ್ಬರೂ ಅಭ್ಯರ್ಥಿಗಳಿಗೆ ಪರಿವೀಕ್ಷಕರು ಆಯೋಗದ ಗಮನಕ್ಕೆ ತಾರದೇ ಉಪ ಕೇಂದ್ರ ಬದಲಾವಣೆಗೆ ಅವಕಾಶ ಮಾಡಿ ಕೊಟ್ಟಿರುವುದು ನಿಜ. ಈ ವಿಷಯದಲ್ಲಿ ಯಾವುದೇ ಅಭ್ಯರ್ಥಿಗೂ ಉಪ ಕೇಂದ್ರ ಬದಲಾವಣೆಗೆ ಅವಕಾಶ ಮಾಡಿಕೊಡಬಾರದೆಂಬ ಆಯೋಗದ ಸೂಚನೆಯನ್ನು ಇದ್ದಾಗ್ಯೂ ಸಹ, ಈ ಇಬ್ಬರು

ಅಭ್ಯರ್ಥಿಗಳ ಉಪ ಕೇಂದ್ರ ಬದಲಾವಣೆ ಮಾಡಲಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿ ಸಂಬಂಧ ಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಸಾರಿಗೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮಂಂಬಡ್ತಿ ಕೊಡುವ ವಿಚಾರ

೬೯೬. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).— (ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮಂತ್ರಿ ಬಂಧೀಖಾನೆ ರಾಜ್ಯ ಸಚಿವರು). —ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಾರಿಗೆ ಇಲಾಖೆಯಲ್ಲಿ ಎಷ್ಟು ಜನ ಅಧೀಕ್ಷಕ ನೌಕರರು ಕನ್ನಡ ಭಾಷಾ ಮತ್ತು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಲ್ಲಿ ೧೯೭೮ನೆಯ ವರ್ಷದಿಂದ ಮಂಂಬಡ್ತಿ ಪಡೆದಿದ್ದಾರೆ ? ವರ್ಷವಾರು ಮಾಹಿತಿಯನ್ನು ತಿಳಿಸುವುದು.

ಆ) ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೋಂದಣಿಯನ್ನು ೧.೧೧.೫೬ ರಿಂದ ನಿರ್ವಹಿಸ ಲಾಗಿದೆಯೆ ?

ಇ) ಹಾಗಿದ್ದಲ್ಲಿ ಡಿಪಿಎಆರ್ ೨೯ ಎಸ್‌ಬಿಸಿ ೭೭ ದಿನಾಂಕ ೨೭-೪-೭೮ ಡಿಪಿಎಆರ್ ಎಸ್‌ಬಿಸಿ ೭೭ ದಿನಾಂಕ ೧-೬-೭೮ ಹಾಗೂ ಡಿಪಿಎಆರ್ ೨೨ ಎಸ್‌ಬಿಸಿ ೭೯, ದಿನಾಂಕ ೩೦-೮-೭೯ನೇ ಸರ್ಕಾರಿ ಆದೇಶಗಳ ಮೇರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಷ್ಟು ಅಧೀಕ್ಷಕರ ನೌಕರರು ಜೇಷ್ಠತಾ ಹಾಗೂ ಅರ್ಹತೆ ಆಧಾರದ ಮೇಲೆ ಮಂಂಬಡ್ತಿ ಪಡೆದಿದ್ದಾರೆ ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು).—

ಅ) ೧೯೭೮ನೆಯ ವರ್ಷದಿಂದ ೧೯೮೬ರ ವರೆಗೆ ಮೋಟಾರು ವಾಹನ ಇಲಾಖೆಯಲ್ಲಿ ೨೩ ಮಂದಿ ಅಧೀಕ್ಷಕರನ್ನು ಟ್ಯಾಕ್ಸ್, ಟ್ರೆಜರಿ, ಸ್ಥಾನಿಕ ಸಹಾಯಕರು, ಸಹಾಯಕ ಕಾರ್ಯದರ್ಶಿ, ಈ ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ. ವರ್ಷವಾರು ಮಾಹಿತಿ ಈ ಕೆಳಗೆ ನಮೂದಿಸಿದಂತಿದೆ.

೧೯೭೮	—	ಇಲ್ಲ
೧೯೭೯	—	(೩) ಅಧೀಕ್ಷಕರು
೧೯೮೦	—	ಇಲ್ಲ
೧೯೮೧	—	ಇಲ್ಲ
೧೯೮೨	—	(೧೦) ಅಧೀಕ್ಷಕರು
೧೯೮೩	—	ಇಲ್ಲ
೧೯೮೪	—	(೯) ಅಧೀಕ್ಷಕರು
೧೯೮೫	—	ಇಲ್ಲ
೧೯೮೬	—	(೧) ಅಧೀಕ್ಷಕರು
ಒಟ್ಟು		೨೩ ಅಧೀಕ್ಷಕರು

ಆ) ಮೋಟಾರು ವಾಹನ ಇಲಾಖೆಯಲ್ಲಿ ವಿವಿಧ ಹುದ್ದೆಗಳಿಗೆ ಬಡ್ತಿ ನೀಡುವ ನಿಯಮಗಳು. ಅಂದರೆ, ಮೈಸೂರು ಸಾಮಾನ್ಯ ಸೇವೆಗಳು, ಇದು ದಿನಾಂಕ ೨೫-೧-೬೨ನೇ ಇಸವಿ ನಂತರ ಜಾರಿಗೆ ಬಂದಿರುತ್ತದೆ. ಆದರಂತೆ ನೋಂದಣಿಯನ್ನು ಆ ದಿನಾಂಕದಿಂದ ಇಡಲಾಗಿದೆ.